# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1324 (1501)

ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 17.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಹವಾಮಾನ ಆಧಾರಿತ ಬೆಳೆ ವಿಮೆ ಪರಿಹಾರ ಮೊತ್ತವು ಕೆಲವು ಜಿಲ್ಲೆಗಳಲ್ಲಿ ಪಾವತಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿರುತ್ತದೆ. |
| ಆ) | ಕೆಲವು ರೈತರಿಗೆ ಪ್ರೀಮಿಯಂ ಮೊತ್ತವು ಸಹ ಬಂದಿರುವುದಿಲ್ಲ ಎನ್ನುವ ಆರೋಪಗಳು ರೈತ ಸಮೂಹದಿಂದ ಕೇಳಿಬಂದಿವೆ; ಇದಕ್ಕೆ ಸರ್ಕಾರದ ಕ್ರಮವೇನು; | ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿಯನ್ನು ವಿಮಾ ಘಟಕವಾಗಿ ಪರಿಗಣಿಸಲಾಗುತ್ತದೆ. ಹವಾಮಾನ ಸೂಚ್ಯಂಕಗಳ ಆಧಾರದ ಮೇಲೆ ಯಾವುದೇ ಘಟಕದಲ್ಲಿ ನಷ್ಟ ಸಂಭವಿಸಿದರೆ, ಆ ಘಟಕದ ಟರ್ಮ್ ಶೀಟ್‌ನ ಅನ್ವಯ ಸಂರಕ್ಷಣೆ (Samrakshane) ತಂತ್ರಾಂಶದ ಮೂಲಕ ಸಮಾನವಾಗಿ ವಿಮಾ ಪರಿಹಾರ ಲೆಕ್ಕ ಹಾಕಲಾಗುತ್ತದೆ. ಅರ್ಹ ರೈತರಿಗೆ ವಿಮಾ ಕಂಪನಿಯು ನೇರವಾಗಿ ವಿಮಾ ಮೊತ್ತ ಪಾವತಿಸುತ್ತದೆ.<br><br>ಸದರಿ ಯೋಜನೆಯ ಮಾರ್ಗಸೂಚಿಯನ್ವಯ ಕೆಳಕಾಣಿಸಿ ಸಂದರ್ಭಗಳಲ್ಲಿ ರೈತರಿಗೆ ಪ್ರೀಮಿಯಂ ಮೊತ್ತವು ಸಹ ಬಾರದೆ ಇರುವ ಸಂಭವವಿರುತ್ತದೆ.<br><br>1. ರೈತರು ನೋಂದಾಯಿಸಿದ ವಿಮಾ ಘಟಕದಲ್ಲಿ ಹವಾಮಾನ ದತ್ತಾಂಶಗಳ ಪ್ರಕಾರ ಮತ್ತು ಟರ್ಮ್ ಶೀಟ್ ಅನ್ವಯ ನಷ್ಟ ಸಂಭವಿಸಿರುವುದಿಲ್ಲ.<br><br>2. ನಷ್ಟ ಸಂಭವಿಸಿದಾಗ್ಯೂ ವಿವಿಧ ಹಂತದ ಹವಾಮಾನ ಸೂಚ್ಯಂಕಗಳಿಗೆ ವಿಮಾ ಲೆಕ್ಕ ಹಾಕಿದಾಗ ಈ ಮೊತ್ತವು ಕಡಿಮೆ ಇರುವ ಸಂಭವವಿರುತ್ತದೆ..<br><br>3.ಅರ್ಜಿದಾರ ರೈತರು ಯೋಜನೆ ಮಾರ್ಗಸೂಚಿಯನ್ವಯ ಅರ್ಹತೆ ಹೊಂದಿರದೆ ಇರುವುದು ಎಂದರೆ ಉದಾ: ಬೆಳೆ ಬೆಳೆಯದೆ ಇರುವುದು ಇಂತಹ ಪ್ರಕರಣಗಳಲ್ಲಿ ವಿಮಾ ಮೊತ್ತ ದೊರೆಯುವುದಿಲ್ಲ.<br><br>4.ವಿವಿಧ ಪ್ರದೇಶಗಳ ಹವಾಮಾನ ವ್ಯತ್ಯಾಸಗಳಿಂದ ಪರಿಹಾರ ಮೊತ್ತದಲ್ಲೂ ವ್ಯತ್ಯಾಸ ಉಂಟಾಗುವುದು ಸಹಜವಾಗಿದೆ. |

| | | |
|---|---|---|
| ಇ) | ಅಡಿಕೆ, ಮಾವು, ದಾಳಿಂಬೆ ಸೇರಿದಂತೆ ಹಲವು ತೋಟಗಾರಿಕಾ ಬೆಳೆಗಳಿಂದ ನಷ್ಟ ಅನುಭವಿಸಿರುವ ರೈತರಿಗೆ ವಿಮಾ ಪರಿಹಾರ ಮೊತ್ತವನ್ನು ನೀಡಲು ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎನ್ನುವ ದೂರುಗಳಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2024-25ನೇ ಸಾಲಿನಲ್ಲಿ ಹನ್ನೊಂದು (11) ಜಿಲ್ಲೆಗಳಲ್ಲಿ ವಿಮಾ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿರುವ ಅನುಷ್ಠಾನ ವಿಮಾ ಸಂಸ್ಥೆಯಾದ M/s. KSHEMA General Insurance Co. Ltd. ಎಂಬ ವಿಮಾ ಕಂಪನಿಯು, ಹವಾಮಾನ ದತ್ತಾಂಶದ ಬಗ್ಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ ವಿಮಾ ಕ್ಲೇಮುಗಳನ್ನು ಇತ್ಯರ್ಥಪಡಿಸಿರುವುದಿಲ್ಲ. ಈಗ ವಿಮಾ ಕ್ಲೇಮುಗಳನ್ನು ಇತ್ಯರ್ಥಪಡಿಸಲು ಪ್ರಾರಂಭಿಸಿರುತ್ತದೆ.<br><br>ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎನ್ನುವ ದೂರುಗಳು ಗಮನಕ್ಕೆ ಬಂದಿರುವುದಿಲ್ಲ. |
| ಈ) | ತೋಟಗಾರಿಕೆ ಬೆಳೆಗಳಿಗೆ ವಿಮೆ ಸಂಬಂಧ ಜಿಲ್ಲಾವಾರು ಇತ್ಯರ್ಥಪಡಿಸಿರುವ ಹಾಗೂ ಬಾಕಿಯಿರುವ ವಿಮಾ ಪರಿಹಾರದ ಮೊತ್ತ ಎಷ್ಟು; ಜಿಲ್ಲಾವಾರು ಸ್ವೀಕೃತವಾದ ಪ್ರಸ್ತಾವನೆಗಳು, ಲೆಕ್ಕ ಹಾಕಿರುವ ವಿಮಾ ಪರಿಹಾರ (ರೈತರ ಪ್ರಸ್ತಾವನೆಗಳ ಸಂಖ್ಯೆ, ವಿಮಾ ಮೊತ್ತ) ಇತ್ಯರ್ಥಪಡಿಸಿರುವ ಬೆಳೆ ವಿಮಾ ಪರಿಹಾರ (ರೈತರ ಪ್ರಸ್ತಾವನೆಗಳ ಸಂಖ್ಯೆ, ವಿಮಾ ಮೊತ್ತ) ಹಾಗೂ ಬಾಕಿಯಿರುವ ಬೆಳೆ ವಿಮಾ ಪರಿಹಾರ (ರೈತರ ಪ್ರಸ್ತಾವನೆಗಳ ಸಂಖ್ಯೆ, ವಿಮಾ ಮೊತ್ತ) ಸಂಪೂರ್ಣ ಮಾಹಿತಿ ನೀಡುವುದು; | 2024-25ನೇ ಸಾಲಿನ ತೋಟಗಾರಿಕೆ ಬೆಳೆಗಳಿಗೆ ವಿಮೆ ಸಂಬಂಧ ಜಿಲ್ಲಾವಾರು ಇತ್ಯರ್ಥಪಡಿಸಿರುವ ಹಾಗೂ ಬಾಕಿಯಿರುವ ವಿಮಾ ಪರಿಹಾರದ ಮೊತ್ತ, ಜಿಲ್ಲಾವಾರು ಸ್ವೀಕೃತವಾದ ಪ್ರಸ್ತಾವನೆಗಳು, ಲೆಕ್ಕ ಹಾಕಿರುವ ವಿಮಾ ಪರಿಹಾರ (ರೈತರ ಪ್ರಸ್ತಾವನೆಗಳ ಸಂಖ್ಯೆ, ವಿಮಾ ಮೊತ್ತ) ಇತ್ಯರ್ಥಪಡಿಸಿರುವ ಬೆಳೆ ವಿಮಾ ಪರಿಹಾರ (ರೈತರ ಪ್ರಸ್ತಾವನೆಗಳ ಸಂಖ್ಯೆ, ವಿಮಾ ಮೊತ್ತ) ಹಾಗೂ ಬಾಕಿಯಿರುವ ಬೆಳೆ ವಿಮಾ ಪರಿಹಾರ (ರೈತರ ಪ್ರಸ್ತಾವನೆಗಳ ಸಂಖ್ಯೆ, ವಿಮಾ ಮೊತ್ತ) ಸಂಪೂರ್ಣ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಉ) | ಯಾವುದಾದರೂ ಕಾರಣದಿಂದ ಬೆಳೆ ವಿಮೆ ಪರಿಹಾರವನ್ನು ಇತ್ಯರ್ಥಪಡಿಸದೆ ತಡೆಹಿಡಿಯಲಾಗಿದೆಯೇ; (ವಿವರ ನೀಡುವುದು) | ತಡೆಹಿಡಿಯಲಾಗಿರುವುದಿಲ್ಲ. |

ಸಂಖ್ಯೆ: HORTI 121 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

LCQ 1324 (1501)

ಅನುಬಂಧ

**ತೋಟಗಾರಿಕೆ ಬೆಳೆಗಳಿಗೆ ವಿಮೆ ಸಂಬಂಧ ಜಿಲ್ಲಾವಾರು ಇತ್ಯರ್ಥಪಡಿಸಿರುವ ಹಾಗೂ ಬಾಕಿಯಿರುವ ವಿಮಾ ಪರಿಹಾರದ ಮೊತ್ತ ವಿವರಗಳು**

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲೆ | ನೋಂದಾಯಿಸಿದ ರೈತರ ಅರ್ಜಿಗಳ ಸಂಖ್ಯೆ | ಅರ್ಹ ರೈತರ ಅರ್ಜಿಗಳ ಸಂಖ್ಯೆ | ಲೆಕ್ಕ ಹಾಕಿರುವ ವಿಮಾ ಪರಿಹಾರ ಮೊತ್ತ | ಇತ್ಯರ್ಥಪಡಿಸಲಾದ ರೈತ ಅರ್ಜಿಗಳ ಸಂಖ್ಯೆ | ಪಾವತಿಸಿದ ಮೊತ್ತ | ಬಾಕಿಯಿರುವ ರೈತ ಅರ್ಜಿಗಳ ಸಂಖ್ಯೆ | ಪಾವತಿಗೆ ಬಾಕಿಯಿರುವ ವಿಮಾ ಮೊತ್ತ |
|---|---|---|---|---|---|---|---|---|
| 1 | ಗದಗ | 71 | 71 | 52.02 | 66 | 47.83 | 5 | 4.18 |
| 2 | ಬಳ್ಳಾರಿ | 167 | 163 | 69.76 | 0 | 0 | 163 | 69.76 |
| 3 | ಯಾದಗಿರಿ | 25 | 25 | 12.01 | 7 | 6.64 | 18 | 5.37 |
| 4 | ಬೆಂಗಳೂರು ಗ್ರಾಮಾಂತರ | 1055 | 1055 | 727.79 | 0 | 0 | 1055 | 727.79 |
| 5 | ವಿಜಯನಗರ | 641 | 637 | 120.92 | 591 | 109.29 | 46 | 11.63 |
| 6 | ಬೀದರ | 280 | 266 | 56.49 | 0 | 0 | 266 | 56.49 |
| 7 | ಚಾಮರಾಜನಗರ | 12 | 12 | 1.34 | 0 | 0 | 12 | 1.34 |
| 8 | ಬೆಂಗಳೂರು ನಗರ | 30 | 30 | 16.03 | 18 | 2.4 | 12 | 13.62 |
| 9 | ಕೋಲಾರ | 6191 | 6191 | 1269.46 | 6127 | 1254.58 | 64 | 14.88 |
| 10 | ಚಿತ್ರದುರ್ಗ | 5780 | 5584 | 1512.75 | 0 | 0 | 5584 | 1512.75 |
| 11 | ಹಾಸನ | 10647 | 10647 | 1497.16 | 10527 | 1478.64 | 120 | 18.51 |
| 12 | ಚಿಕ್ಕಬಳ್ಳಾಪುರ | 3336 | 3336 | 1499.8 | 3303 | 1477.09 | 33 | 22.71 |
| 13 | ರಾಮನಗರ | 9369 | 9369 | 2547.92 | 9264 | 2518.16 | 105 | 29.76 |
| 14 | ತುಮಕೂರು | 15150 | 13554 | 1910.46 | 13272 | 1871.46 | 282 | 39 |
| 15 | ದಾವಣಗೆರೆ | 18687 | 18687 | 4127.16 | 18440 | 4067.06 | 247 | 60.1 |
| 16 | ಕೊಪ್ಪಳ | 1624 | 1624 | 576.42 | 1375 | 509.7 | 249 | 66.71 |
| 17 | ಕಲಬುರಗಿ | 313 | 304 | 98.75 | 0 | 0 | 304 | 98.75 |
| 18 | ಕೊಡಗು | 5711 | 5637 | 409.22 | 0 | 0 | 5637 | 409.22 |
| 19 | ಉಡುಪಿ | 21371 | 21371 | 4234.51 | 20989 | 4158.73 | 382 | 75.79 |
| 20 | ಧಾರವಾಡ | 10267 | 10267 | 4668.29 | 9918 | 4556.29 | 349 | 112 |
| 21 | ಮಂಡ್ಯ | 11 | 11 | 1.13 | 0 | 0 | 11 | 1.13 |
| 22 | ಮೈಸೂರು | 12 | 12 | 1.66 | 0 | 0 | 12 | 1.66 |
| 23 | ರಾಯಚೂರು | 176 | 176 | 93.76 | 0 | 0 | 176 | 93.76 |
| 24 | ಬೆಳಗಾವಿ | 8685 | 8685 | 8492.19 | 8342 | 8357.23 | 343 | 134.96 |
| 25 | ಶಿವಮೊಗ್ಗ | 90811 | 89857 | 11355.74 | 88443 | 11189.7 | 1414 | 166.03 |
| 26 | ಹಾವೇರಿ | 23595 | 23595 | 5993.97 | 22211 | 5619.09 | 1384 | 374.88 |
| 27 | ಚಿಕ್ಕಮಗಳೂರು | 70506 | 66868 | 9483.29 | 63730 | 8993.01 | 3138 | 490.28 |
| 28 | ಉತ್ತರ ಕನ್ನಡ | 90245 | 90245 | 7413.42 | 0 | 0 | 90245 | 7413.42 |
| 29 | ಬಾಗಲಕೋಟೆ | 5302 | 5302 | 7927.59 | 4302 | 6589.66 | 1000 | 1337.93 |
| 30 | ವಿಜಯಪುರ | 19104 | 19104 | 33893.9 | 17785 | 31207.23 | 1319 | 2686.66 |
| 31 | ದಕ್ಷಿಣ ಕನ್ನಡ | 332750 | 332748 | 28160.85 | 299593 | 24993.96 | 33155 | 3166.89 |
|  | **ಒಟ್ಟು** | **751924** | **745433** | **138226.76** | **598303** | **119007.76** | **147130** | **19217.96** |